ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE

# ಹಿರಿಯ ನಟ ಶನಿಮಹದೇವಪ್ಪ ನಿಧನ

**ಬೆಂಗಳೂರು:** ಕನ್ನಡ ಚಿತ್ರರಂಗದ ಹಿರಿಯ ನಟ ಶನಿ ಮಹದೇವಪ್ಪ (88) ಅವರು ಭಾನುವಾರ ನಿಧನ ಹೊಂದಿದ್ದಾರೆ. ವಯೋಸಹಜ ಕಾಯಿಲೆಯ ಜೊತೆಗೆ ಕೊರೊನಾ ಸೋಂಕಿನಿಂದಲೂ ಬಳಲುತ್ತಿದ್ದ ಅವರು ತಮ್ಮ ಸ್ವಗೃಹದಲ್ಲಿ ಕೊನೆಯುಸಿರೆಳೆದಿದ್ದಾರೆ. ಪತ್ನಿ, ಪುತ್ರ, ಪುತ್ರಿಯನ್ನು ಅಗಲಿದ್ದಾರೆ.



ಕನ್ನಡದಲ್ಲಿ 400ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿರುವ ಶನಿ ಮಹದೇವಪ್ಪ, ಡಾ.ರಾಜ್‌ಕುಮಾರ್ ಅವರ ಜೊತೆ 100ಕ್ಕೂ ಹೆಚ್ಚು ಚಿತ್ರಗಳಲ್ಲಿ ಪ್ರಮುಖ ಪಾತ್ರ ಮಾಡಿದ್ದಾರೆ. 'ಸಂಪತ್ತಿಗೆ ಸವಾಲ್', 'ಶಂಕರ್‌ಗುರು', 'ಭಕ್ತ ಕುಂಬಾರ', 'ಭಕ್ತಪ್ರಹ್ಲಾದ', 'ಕವಿರತ್ನ ಕಾಳಿದಾಸ', 'ಹಾಲು ಜೇನು', 'ರಣರಂಗ', 'ಚಕ್ರವ್ಯೂಹ', 'ಗೌರಿ ಗಣೇಶ', 'ಆತ್ಮಬಂಧನ', 'ಮನ ಮೆಚ್ಚಿದ ಸೊಸೆ', 'ಜಯಸಿಂಹ', 'ಜೀವನ ಜ್ಯೋತಿ', 'ತ್ರಿಮೂರ್ತಿ' ಸೇರಿದಂತೆ ಸಾಕಷ್ಟು ಸಿನಿಮಾಗಳಲ್ಲಿ ಖಳನಟರಾಗಿ, ಪೋಷಕ ನಟರಾಗಿ ಮಿಂಚಿದವರು.

**ಶನಿಮಹಾತ್ಮೆಯಿಂದ ಬಣ್ಣದ ಬದುಕು:** ಶನಿ ಮಹದೇವಪ್ಪ ಅವರ ಹೆಸರಿನಲ್ಲಿ 'ಶನಿ' ಸೇರಿಕೊಳ್ಳಲು ಕಾರಣ ಅವರು ಮಾಡುತ್ತಿದ್ದ ನಾಟಕ. ಮೈಸೂರಿನ ಶ್ರೀಜಯಚಾಮರಾಜೇಂದ್ರ ಒಡೆಯರ್ ಕೃಪಾಪೋಷಿತ ನಾಟಕ ಮಂಡಳಿಯ ರಾಜ ವಿಕ್ರಮ ನಾಟಕದಲ್ಲಿ ಶನಿಮಹಾತ್ಮೆ ಪಾತ್ರಕ್ಕೆ ಮೊದಲ ಬಾರಿಗೆ ಬಣ್ಣ ಹಚ್ಚಿದ ಮಹದೇವಪ್ಪನವರು, ಆ ಪಾತ್ರವನ್ನು ಅದ್ಭುತವಾಗಿ ನಿರ್ವಹಿಸುವ ಮೂಲಕ ಅವರ ಹೆಸರಿನ ಮುಂದೆ 'ಶನಿ' ಸೇರಿಕೊಳ್ಳುತ್ತದೆ.

**ಖಳನಟರಾಗಿಯೂ ಮಿಂಚಿದವರು:** ಶನಿ ಮಹದೇವಪ್ಪನವರು ಒಂದು ಕಾಲದಲ್ಲಿ ಕನ್ನಡ ಚಿತ್ರರಂಗದ ಖಳನಟರ ಸಾಲಿನಲ್ಲಿ ಮುಂಚೂಣಿಯಲ್ಲಿದ್ದವರು. ವಜ್ರಮುನಿ, ಸುಧೀರ್, ತೂಗುದೀಪ ಶ್ರೀನಿವಾಸ್, ಸುಂದರ್ ಕೃಷ್ಣ ಅರಸ್ ಅವರ ಸಾಲಿನಲ್ಲಿ ಖಳನಟರಾಗಿ ಬೇಡಿಕೆಯಲ್ಲಿದ್ದವರು. ಖಳಪಾತ್ರಗಳ ಜೊತೆಗೆ ಪೋಷಕ ಪಾತ್ರಗಳಲ್ಲೂ ಬಣ್ಣ ಹಚ್ಚಿ ಸೈ ಎನಿಸಿಕೊಂಡವರು.

**ಡಾ.ರಾಜ್‌ಕುಮಾರ್ ಜೊತೆ 100ಕ್ಕೂ ಹೆಚ್ಚು ಚಿತ್ರಗಳಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ್ದ ನಟ**

ಡಾ.ರಾಜ್ ಕುಟುಂಬದ ಆಪ್ತರಾಗಿದ್ದ ಅವರು ತಮ್ಮ ಸಿನಿಜೀವನದ ಬಹುತೇಕ ಪಯಣವನ್ನು ಡಾ.ರಾಜ್ ಜೊತೆಗೆ ಕಳೆದವರು. ಡಾ.ರಾಜ್ ಸಿನಿಮಾದಲ್ಲಿ ಶನಿಮಹದೇವಪ್ಪನವರಿಗೆ ಪ್ರಮುಖ ಪಾತ್ರವಿರುತ್ತಿತ್ತು. ತಮ್ಮ ಪಾತ್ರವನ್ನು ಲೀಲಾಜಾಲವಾಗಿ ನಿರ್ವಹಿಸುವ ಮೂಲಕ ಹೊಸ ಹೊಸ ಅವಕಾಶಗಳನ್ನು ಗಿಟ್ಟಿಸಿಕೊಂಡವರು ಶನಿಮಹದೇವಪ್ಪ. ಅಂಬರೀಶ್, ವಿಷ್ಣುವರ್ಧನ್ ಸೇರಿದಂತೆ ಬಹುತೇಕ ಅಂದಿನ ಎಲ್ಲಾ ನಟರ ಚಿತ್ರಗಳಲ್ಲೂ ನಟಿಸಿದ್ದಾರೆ. 2008ರಲ್ಲಿ ತೆರೆಕಂಡ 'ಮೂರನೇ ಕ್ಲಾಸ್ ಮಂಜ ಬಿ.ಕಾಂ ಭಾಗ್ಯ' ಚಿತ್ರದಲ್ಲಿ ಕೊನೆಯದಾಗಿ ಬಣ್ಣ ಹಚ್ಚಿದ್ದರು. ಶನಿಮಹದೇವಪ್ಪ ಅವರಿಗೆ ಡಾ.ರಾಜ್‌ಕುಮಾರ್ ಸೌಹಾರ್ದ ಪ್ರಶಸ್ತಿ, ವರದರಾಜು ಪ್ರಶಸ್ತಿಗಳು ಅರಸಿ ಬಂದಿದ್ದವು. ಇವರ ನಿಧನಕ್ಕೆ ಕನ್ನಡ ಚಿತ್ರರಂಗ ಕಂಬನಿ ಮಿಡಿದಿದೆ.